ಬಿಡುವ ಹಾಗೆ ಕಾಣುವುದಿಲ್ಲವೆಂದು ಖಾತ್ರಿಯಾಗಿದ್ದೇ ಶ್ರೀಪಾದ ಅರೆಮನಸ್ಸಿನಿಂದಲೇ ಆಯ್ತೆಂದು ಹೂಂಗುಟ್ಟಿದ್ದ.

★★★

ಬಸ್ಸಿನಲ್ಲಿ ಕೂತಾಗಲೂ ಅವನು ಅನ್ಯಮನಸ್ಕನಾಗಿ ಸುಮ್ಮನೇ ಹೊರ ನಿಟ್ಟಿಸುತ್ತಿದ್ದ. ವೈದೇಹಿಯ ಸಡಗರ ಹಾಗೂ ಉತ್ಸಾಹ ಕಂಡು ಚಕಿತನಾದರೂ ಅಸಹಜವೆನ್ನಿಸಲಿಲ್ಲ. ಬಾಲ್ಯದಲ್ಲಿ ಕಂಡ ಅದೇ ಚಿರಪರಿಚಿತ ದಾರಿಯಾದರೂ ಸಾಕಷ್ಟು ಬದಲಾಗಿತ್ತು. ಮೊದಲಿನ ಅಚ್ಚ ಹಸುರಿನ ಕಾಡು ಹೋಗಿ, ಊರು, ಮನೆ, ಪೇಟೆಗಳೆಂದು ಸಾಕಷ್ಟು ಸುಧಾರಿಸಿದ ಹಾದಿಯಲ್ಲಿ ತಾನು ಕಳೆದುಕೊಂಡ ಆಪ್ತ ಕೊಂಡಿಯನ್ನು ಕನಸಿನಲ್ಲೆಂಬಂತೆ ಕನವರಿಸುತ್ತಾ ಕಣ್ಣು ಕಿರಿದುಗೊಳಿಸಿ ಹುಡುಕುತ್ತಿರುವಾಗ ವೈದೇಹಿಯ ಮಾತು ಅವನನ್ನು ಎಚ್ಚರಿಸಿತು:

'ಯಾರ್ಯಾರಿಗೆ ಏನೇನಂತಾ ಆ ದೇವ್ರು ಬರ್ದಿದಾನೋ ಅವ್ರಿಗ್ ಅವೆಲ್ಲಾ ಸಿಕ್ರೇ ಬದುಕೊಂದು ಸರಳ ಸುಸೂತ್ರ ಕಂಡ್ಯಾ? ನಂಗ್ ಕನಸಲೀ ದಿನವೂ ಇವ್ರು ಬಂದು, 'ಬಿಡ್ಸಕ್ಕಂಡ್ ಬಂದ್ಯಾ ವೈದೇಹಿ?' ಅಂತಾ ಕೇಳೂದದೆ ಮಾರಾಯ. ಒಂದ್ ದಿನಾ ಸಮಾ, ಎರ್ಡು ದಿನಾ ಸಮಾ, ದಿನವೂ ಬಂದ್ರೆಂತಾ ಹೇಳುಕು? ಎಲ್ಲೋ ಅವರಾತ್ಮಕ್ಕೆ ಮನಃಶಾಂತಿಯಿಲ್ದೇ ಅಲೀತಿದ್ಯೋ ಯೆಂತೋ? ಚೈತ್ರಾಗೆ ಅಪಾಟಿ ಬಂಗಾರ ಕಂಡು ಖುಷಿಯ್ಯಾಗ್ತೆ ಬಿಡು!'

ಸಮಜಾಯಿಸುತ್ತಾ ವೈದೇಹಿ ಹೇಳಿದಾಗ, ಶ್ರೀಪಾದನಿಗೆ ಆ ರಗಳೆಯಲ್ಲೂ ತನ್ನನ್ನು ಬಂಧಿಸಲು ಅಮ್ಮ ಹುಡುಕುತ್ತಿರುವ ಭಾವನಾತ್ಮಕ ಎಳೆ ಕಂಡು ಒಂದು ಕ್ಷಣ ತಮಾಷೆಯೆನ್ನಿಸಿತು. ಮರುಕ್ಷಣ ಮರುಕವೂ ಉಕ್ಕಿ ಬಂತು.

ಟ್ರಾಕ್ಟರಿಗೆ ಅಡಿಕೆ ಗೊನೆ ತುಂಬಿಸುತ್ತಾ ಒಂದು ಪಾಣಿ ಪಂಚೆ ಸುತ್ತಿಕೊಂಡು ಶಿವ್ರಾಮ ಅಂಗಳದಲ್ಲೇ ನಿಂತಿದ್ದ. ಕೈಯನ್ನು ಓರೆ ಮಾಡಿ ನೋಡಿ, 'ಹೋ ಹೋ ಹೋ ಬಾರೀ ಅಪ್ರೂಪದ್ದೋರು. ಯೆಂತಾ ನಾ ಕಾಣ್ತಿರೋದು ಬದ್ದಕ್ಕೂ ಸತ್ಯವಾ?' ನೆಗಾಡುತ್ತಲೇ ಒಳಮಾಡಿಕೊಂಡ. ಶ್ರೀಪಾದನಿಗೆ ಹೊಟ್ಟೆಯೊಳಗೆ ಎಂತದೋ ಪುಳ್ಳಕ್ಕನೆ ಜಾರಿದಂತಾಗಿ ಬಾಲ್ಯದ ಅದೇ ಮುಜುಗರದಿಂದಲೇ ಮುಂಚೇಕಡೆ ದಾಟಿ ಚೌಕಿ ಹಾದು ಅಮ್ಮನ ಹಿಂದೆ ಸಣ್ಣಗೆ ನಗುತ್ತಾ ನಡುಮನೆಗೆ ಸಾಗಿದ.

ಕತ್ತಲೆಯಲ್ಲಿ ಮುಚ್ಚಿಯೇ ಹೋದ ಅದೇ ನಡುಮನೆ. ಮೂಲೆಯ ಕಂಬಕ್ಕೊರಗಿ ವೈದಿಕದ ಊಟಕ್ಕಾಗಿ ಕಾಯುತ್ತಿದ್ದ ಅದೇ ಬಾಲ್ಯ. ಇವನನ್ನು ನೋಡಿದ್ದೇ ನೆಗಾಡುತ್ತಿದ್ದ ಶಿವ್ರಾಮ ಮತ್ತವನ ತಮ್ಮ ಸುಬ್ರಾಯ. ಹಾಗೆ ನೋಡಿದರೆ ಅವರಿಬ್ಬರೂ ತನಗೆ ದಾಯಾದಿಗಳಲ್ಲವೇ? ದೊಡ್ಡಪ್ಪಯ್ಯ ಬದುಕಿರುವಾಗಲೇ ಇಬ್ಬರಿಗೂ ಸಾಕಷ್ಟು ಕಿತ್ತಾಟವಾಗಿ, ಮನೆ ಇಬ್ಭಾಗವಾಗಿ ಸುಬ್ರಾಯನ ಕುಟುಂಬ ಹಿಂಬದಿಯ ಭಾಗವನ್ನು ಆಕ್ರಮಿಸಿಕೊಂಡಿದೆಯೆಂದು ವೈದೇಹಿಯೇ ಹಿಂದೊಮ್ಮೆ ಹೇಳಿದ ಕತೆ. ಹೊರ ಚೌಕಿಯವರೆಗೂ ಬಾಳೆಲೆ ಹಾಕುತ್ತಿದ್ದ ಸಂತರ್ಪಣೆಗಾಗಿಯೇ ನಿರ್ಮಿಸಿದ್ದ ವಿಶೇಷ ಅಡುಗೆ ಕೊಟ್ಟಿಗೆಯೀಗ ಸುಬ್ರಾಯನ ಅಡುಗೆ ಮನೆ!

'ಏಯೀ ಮಂಗ್ಳಾ, ಎಲ್ ಅದಿಯೇ? ಬಾಳಾ ಅಪ್ರೂಪದವ್ರು ನೆಂಟ್ರು ಬಂದ್ದಾರೆ! ಬಂದ್ ನೋಡೇ!'

ಶಿವ್ರಾಮನ ಹೆಂಡತಿ ಮಂಗಳಾಳನ್ನು ಶ್ರೀಪಾದ ನೋಡಿದ್ದು ಇತ್ತಾದರೂ ಯಾಕೋ ಈ ಸಂದರ್ಭದಲ್ಲಿ ಎಲ್ಲಾ ಮರೆತೇ ಹೋದಂತೆ ಅನ್ನಿಸಿತವನಿಗೆ. ಮನೆ ಇಬ್ಭಾಗವಾಗಿದ್ದರೂ ಯಾವ ಬದಲಾವಣೆಯಾಗಿರದ ತನ್ನ ಪೂರ್ವಜರು ವಾಸ ಮಾಡಿ ಅಳಿದ ಅದೇ ಅಡುಗೆಮನೆ ಸುಣ್ಣ, ಬಣ್ಣ ಕಾಣದೇ ಯುಗಗಳಾದಂತೆ ಹೊಗೆ ಮೆತ್ತಿದ ಗೋಡೆಯಲ್ಲಿ ಮಬ್ಬಾಗಿ ನಿಂತಿತ್ತು.

'ಹೆಂಗದೀರಿ ಅತ್ತೆ? ಶ್ರೀಪಾದನ್ನೂ ಕರ್ಕಂಡ್ ಬಂದ್ರೀ. ಒಳ್ಳೆದಾತು. ನೋಡ್ಯಾವ ಕಾಲಾಯ್ತು. ಹೆಂಗದಿಯೋ? ಮಗ್ಳಿಗೆ ಮದ್ವೆಯಂತಲಾ? ಸುಮ್ನಿನೂ ಕರ್ಕಂಡ್ ಬರ್ಬೇಕಿತ್ತು.'